ಸಿ. ಸಿ. ನಂ.- 1132/2023

ಸಿ.ಡಬ್ಲ್ಯೂ- 02 / ಪಿ.ಡಬ್ಲ್ಯೂ- 03

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಹೊಸಪೇಟೆ.

ಸಾಕ್ಷಿಯನ್ನು ದಿನಾಂಕ 13-01-2025 ರಂದು ಪ್ರಮಾಣೀಕರಿಸಲಾಯಿತು.

| | |
|---|---|
| ಸಾಕ್ಷಿ ಹೆಸರು - | ದೇವರಾಜ |
| ತಂದೆಯ ಹೆಸರು - | ಬಸಪ್ಪ ಹಂಚಿನಾಳ |
| ವಯಸ್ಸು - | 26 ವರ್ಷಗಳು |
| ಉದ್ಯೋಗ - | ಚಾಲಕ |
| ವಾಸಸ್ಥಳ - | ಹಿಟ್ನಾಳ ಗ್ರಾಮ ಕೊಪ್ಪಳ |

ಮುಖ್ಯ ವಿಚಾರಣೆ- ಮಾನ್ಯ ಎ. ಪಿ. ಪಿ. ಅವರಿಂದ-

ಮೃತ ದುರ್ಗೇಶ ನನ್ನ ಸ್ನೇಹಿತ. ದಿಃ 15.08.2023 ರಂದು ಬೆಳ್ಳಿಗ್ಗೆ 11.30 ಗಂಟೆಗೆ ನನ್ನ ಸ್ನೇಹಿತ ದುರ್ಗೇಶ ಮತ್ತು ನಾನು ಹೊಪಸೇಟೆಗೆ ಬಂದು ಅಂಡರ್ ಗ್ರೌಂಡ್ ನಿಂದ ವಾಪಸ್ಸು ಊರಿಗೆ ಹೋಗುತ್ತಿದ್ದೆವು. ನಮ್ಮ ವಾಹನ ಅರ್ ಎಕ್ಸ್ 100 ಅಗಿತ್ತು. ಅದನ್ನು ದುರ್ಗೇಶ ಚಲಾಯಿಸುತ್ತಿದ್ದನು. ನಾನು ದ್ವಿಚಕ್ರ ವಾಹನದ ಹಿಂದಿನ ಸೀಟ್ ನಲ್ಲಿ ಕುಳಿತುಕೊಂಡಿದ್ದೆ. ನಾವು ಹೋಗುವ ದಾರಿಯಲ್ಲಿ ಶನಿಶ್ವರ ದೇವಸ್ಥಾನದ ಮುಂದೆ ನಮ್ಮನ್ನು ಓವರ್ ಟೇಕ್ ಮಾಡಿಕೊಂಡು ಒಂದು ಇನೋವಾ ಕಾರ ನಮ್ಮ ಮುಂದೆ ಬಂದಿತ್ತು. ಸದರಿ ಕಾರ ಚಾಲಕನು ಒಮ್ಮೆಲೇ ಬ್ರೇಕ್ ಹಾಕಿದನು. ಆದ್ದರಿಂದ ನಮ್ಮ ದ್ವಿಚಕ್ರ ವಾಹನ ಇನೋವಾ ಕಾರಿಗೆ ಡಿಕ್ಕಿ ಆಯಿತು. ನಾವು ಕಾರಿಗೆ ಗುದ್ದಿ ಬಿದ್ದೆವು. ನನ್ನ ಕುತ್ತಿಗೆ ಮತ್ತು ಮೊಣಕಾಲಿಗೆ ಪೆಟ್ಟಾಗಿತ್ತು. ದುರ್ಗೇಶನ ತಲೆಗೆ ಪೆಟ್ಟು ಬಿದ್ದು ಕಾಲು ಮುರಿದಿತ್ತು. ಆತನ ಮರ್ಮಾಂಗಕ್ಕೆ ಪೆಟ್ಟು ಬಿದಿತ್ತು. ಅಪಘಾತದ ನಂತರ ದುರ್ಗೇಶ ತನ್ನ ಅಣ್ಣ ಆದ ಚಾಸಾ 13 ರವರಿಗೆ ಫೋನ್ ಮಾಡಿದನು. ಚಾಸಾ 13 ರವರು ಬಂದ ನಂತರ ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಬಂದರು. ನಂತರ ನಮ್ಮನ್ನು ಹೆಚ್ಚಿನ ಚಿಕಿತ್ಸೆಗೆ ಹುಬ್ಬಳ್ಳಿ ಗೆ ಕರೆದುಕೊಂಡು ಹೋದರು. ನನಗೆ ಚಿಕಿತ್ಸೆ ನೀಡಿ ವಾಪಸ್ಸು ಕಳುಹಿಸಿದರು. ದುರ್ಗೇಶರವರು ಆಸ್ಪತ್ರೆಯಲ್ಲಿ ಮರಣ ಹೊಂದಿದರು. ಅಪಘಾತವು ಕಾರ ಚಾಲಕನ ತಪ್ಪಿನಿಂದ ಆಗಿರುತ್ತದೆ. ಕಾರ ಚಾಲಕನ ಹೆಸರು ರಾಜರಾವ್ ಎಂದು ಗೊತ್ತಾಯಿತು. ಅಪಘಾತ ಆದ ನಂತರ ಹಲವಾರು ಜನರು ಸೇರಿದ್ದರು. ಆಗ ನಾನು ಅವರನ್ನು ನೋಡಿದ್ದೆ. ಆದರೆ ನನಗೆ ಪೆಟ್ಟಾಗಿದ್ದರಿಂದ ಅವರನ್ನು ಸರಿಯಾಗಿ ಗೊತ್ತಾಗಿರಲಿಲ್ಲ. ಈಗ ಅವರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ನಾನು ವಾಹನಗಳನ್ನು ನೋಡಿದರೆ

ಗುರುತಿಸುತ್ತೇನೆ. ಸಾಕ್ಷಿ ನಿಪಿ 7 ಮತ್ತು 8 ರಲ್ಲಿನ ದ್ವಿಚಕ್ರ ವಾಹನದ ಫೋಟೊಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಇನೋವಾ ಕಾರ ವಾಹನದ ಫೋಟೊವನ್ನು ನೋಡಿ ಗುರುತಿಸಿದ್ದರಿಂದ ಸದರಿ ಫೋಟೊವನ್ನು ನಿಪಿ 9 ಎಂದು ಗುರುತಿಸಲಾಯಿತು.

<u>ಪಾಟೀಸವಾಲು- ಆರೋಪಿತರ ಪರ ವಕೀಲರಿಂದ</u>-

ನಾನು ಮತ್ತು ಮೃತ ದುರ್ಗೇಶ 4-5 ವರ್ಷಗಳಿಂದ ಸ್ನೇಹಿತರು. ದುರ್ಗೇಶ ದ್ವಿಚಕ್ರ ವಾಹನದ ಮೇಕ್ಯಾನಿಕ ಕೆಲಸ ಮಾಡುತ್ತಿದ್ದರು. ನಾನು ಚಾಲಕ ವೃತ್ತಿ ಮಾಡುತ್ತೇನೆ. ನನ್ನ ಬಳಿ ವಾಹನ ಚಾಲನಾ ಪರವಾನಿಗೆ ಇರುತ್ತದೆ. ದುರ್ಗೇಶನ ಬಳಿ ವಾಹನ ಚಾಲನಾ ಪರವಾನಿಗೆ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಹಾಗೂ ಹಿಟ್ನಾಳ ಗ್ರಾಮದಿಂದ ಬಂದಿದ್ದೆವು. ಹೊಸಪೇಟೆಯಿಂದ ಹಿಟ್ನಾಳ ಗ್ರಾಮವು ಸುಮಾರು 15 ಕಿ.ಮೀಟರ ದೂರ ಇರಬಹುದು. ನನಗೆ ವಾಹನಗಳ ಬಗ್ಗೆ ಜ್ಞಾನ ಇದೆ ಎಂದರೆ ಸರಿ. ಯಮಹಾ ಅರ್ ಎಕ್ಸ್ 100 ವಾಹನದಲ್ಲಿ ತೊಂದರೆ ಇದೆ ಎನ್ನುವ ಕಾರಣಕ್ಕೆ ಅದನ್ನು ಈಗ ಬ್ಯಾನ್ ಮಾಡಿದ್ದರೆ ಎಂದರೆ ಸರಿ. ಅರ್ ಎಕ್ಸ್ 100 ವಾಹನವನ್ನು ರೇಸ್ ಗಾಗಿ ಉಪಯೋಗಿಸುತ್ತಾರೆ ಎಂದರೆ ಸರಿ. ಹಿಟ್ನಾಳ ಗ್ರಾಮದಿಂದ ನಾವು ಹೊಸಪೇಟೆಯ ಹೆದ್ದಾರಿಯಲ್ಲಿ ಇರುವ ಅಂಡರ್ ಗ್ರೌಂಡ ಬಳಿ ಬರುವ ಯೋಚನೆ ಇತ್ತು. ಘಟನೆಯ ದಿನ ನಾವು ಸ್ವಾತ್ರಂತ್ಯ ದಿನದ ಸಂಭ್ರಮದಲ್ಲಿ ಇದ್ದೆವು ಎಂದರೆ ಸರಿ. ಆ ದಿನ ಹಿಟ್ನಾಳ ಗ್ರಾಮದಿಂದ ಇನ್ನೂ ನಾಲ್ಕು ಜನರು ವಾಹನದಲ್ಲಿ ಬಂದಿದ್ದರು. ನನಗೆ ಅವರಿಗೆ ಪರಿಚಯವಿಲ್ಲ. ಅವರೂ ಸಹ ಅರ್ ಎಕ್ಸ್ 100 ವಾಹನ ತಂದಿದ್ದರು. ನಾವೆಲ್ಲರೂ ಪೈಪೋಟಿಯಲ್ಲಿ ಹಿಟ್ನಾಳ ಗ್ರಾಮದಿಂದ ಹೊಸಪೇಟೆಗೆ ಬರುತ್ತಿದ್ದೇವು ಎಂದರೆ ಸರಿಯಲ್ಲ. ನಾವು ವೇಗವಾಗಿ ವಾಹನ ಚಲಾಯಿಸಿಕೊಂಡು ಬರುತ್ತಿದ್ದೆವು ಎಂದರೆ ಸರಿಯಲ್ಲ. ನಾವು ಬರುತ್ತಿದ್ದ ರಸ್ತೆ ಎನ್ ಹೆಚ್ 50 ಆಗಿದ್ದು ಅದು 6 ಲೇನ್ ವುಳ್ಳ ರಸ್ತೆ ಎಂದರೆ ಸರಿ. ಹಿಟ್ನಾಳ ಗ್ರಾಮದಿಂದ ಬಂದು ಅಂಡರ್ ಪಾಸ್ ಬಳಿ ನಾವು ತಿರುವು ಪಡೆದೆವು ಎಂದರೆ ಸರಿ. ಆ ದಿನ ಬಹಳಷ್ಟು ಜನರು ಗೂಂಡಾ ಪಾರೆಸ್ಟ್ ವಿಕ್ಷಣೆ ಮಾಡಲು ಬಂದಿದ್ದರು ಎಂದರೆ ಸರಿ. ಸದರಿ ಸ್ಥಳ ಪ್ರೇಕ್ಷಣೆಯ ಸ್ಥಳ ಎಂದರೆ ಸರಿ. ನಾವು ಅಲ್ಲಿ ನಿಂತು ಸ್ಥಳವನ್ನು ನೋಡಿಲ್ಲ ಎಂದರೆ ಸರಿ. ನಾವು ಯಾವ ರೀತಿ ಬಂದೆವು ಅದೇ ರೀತಿ ವಾಪಸ್ಸು ಹೋಗುತ್ತಿದ್ದೆವು ಎಂದರೆ ಸರಿ.

ಸಿ. ಸಿ. ನಂ.- **1132/2023**

ಸಿ.ಡಬ್ಲ್ಯೂ.- **02** / ಪಿ.ಡಬ್ಲ್ಯೂ.- **03**

**2.** ನಿಪಿ **9** ರಲ್ಲಿನ ಕಾಣುವಂತೆ ಕಾರಿನ ಗಾಜು ಮಾತ್ರ ಜಕಂ ಆಗಿದ್ದು ಬೇರೆ ಯಾವುದೆ ಭಾಗ ಜಕಂ ಅಗಿಲ್ಲ ಎಂದರೆ ಸರಿ. ನಿಪಿ **7** ಮತ್ತು **8** ರಲ್ಲಿ ಕಾಣುವಂತೆ ದ್ವಿಚಕ್ರ ವಾಹನದ ಮುಂದಿನ ವಿಲ್ ಬೆಂಡ್ ಆಗಿದೆ ಎಂದರೆ ಸರಿ. ದ್ವಿಚಕ್ರ ವಾಹನದ ಹಿಂದಿನ ಭಾಗ ಜಕಂ ಆಗಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ವಿಲಿಂಗ್ ಮಾಡಿಕೊಂಡು ಹೋಗುವಾಗ ಅಪಘಾತ ಆದರೆ ಕಾರಿನ ಗಾಜು ಮತ್ತು ಬೈಕ್ ನ ಮುಂಭಾಗ ಮಾತ್ರ ಜಕಂ ಆಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅಪಘಾತ ಆದ ನಂತರ ನನಗೆ ಪ್ರಜ್ಞೆ ತಪ್ಪಿತ್ತು ಎಂದರೆ ಸರಿಯಲ್ಲ. ಅಪಘಾತ ಸ್ಥಳದಲ್ಲಿ ಎರಡು ರಸ್ತೆ ಕೂಡುತ್ತವೆ ಎಂದರೆ ಸರಿ. ಅಲ್ಲಿ ಅರ್ ಟಿ ಓ ಚೆಕ್ ಪೊಸ್ಟ್ ಇದೆ ಎಂದರೆ ಸರಿ. ಅರ್.ಟಿ.ಓ ಚೆಕ್ ಪೊಸ್ಟ್ ನವರು ಪರೀಶಿಲನೆ ಮಾಡುತ್ತಾರೆ ಎಂಬ ಕಾರಣಕ್ಕೆ ಕಾರ ಮತ್ತು ಲಾರಿ ವಾಹನಗಳು ಸದರಿ ರಸ್ತೆಯಲ್ಲಿ ನಿಧಾನವಾಗಿ ಚಲಿಸುತ್ತವೆ ಎಂದರೆ ಸರಿ. ನಾನು ಹಾಗೂ ದುರ್ಗೇಶ ಆ ದಿನ ವಿಲಿಂಗ್ ಮಾಡಿಕೊಂಡು ಬರುತ್ತಿದ್ದೆವು ಎಂದರೆ ಸರಿಯಲ್ಲ. ನಾವೇ ವೇಗವಾಗಿ ಮತ್ತು ರಭಸದಿಂದ ಹೋಗಿ ಅರೋಪಿಯ ಕಾರ ವಾಹನಕ್ಕೆ ಡಿಕ್ಕಿ ಪಡೆಸಿರುತ್ತೇವೆ ಎಂದರೆ ಸರಿಯಲ್ಲ. ಅಪಘಾತದ ನಂತರ ಆರೋಪಿಯು ರಸ್ತೆಯ ಎಡಭಾಗಕ್ಕೆ ಕಾರ ನಿಲ್ಲಿಸಿ ನಮ್ಮ ಬಳಿ ಬಂದು ಉಪಚಾರ ನೋಡಿಕೊಂಡರು ಎಂದರೆ ಸರಿ. ಆರೋಪಿ ನಮ್ಮನ್ನು ಆಸ್ಪತ್ರೆಗೆ ಕಳುಹಿಸಿದರು ಎಂದರೆ ಸರಿಯಲ್ಲ. ಮೇಕ್ಯಾನಿಕ್ ಆಗಿದ್ದ ದುರ್ಗೇಶ ವಾಹನವನ್ನು ತನಗೆ ಬೇಕಾದ ಹಾಗೇ ತಯಾರಿಸಿಕೊಂಡು ಬ್ಯಾನ್ ಆಗಿದ್ದ ಯಮಹಾ ವಾಹನವನ್ನು ವಿಲಿಂಗ್ ಮಾಡಿಕೊಂಡು ಹೋಗಿ ನಿಧಾನವಾಗಿ ಹೋಗುತ್ತಿದ್ದ ಆರೋಪಿಯ ವಾಹನಕ್ಕೆ ಡಿಕ್ಕಿ ಪಡೆಸಿದರು ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತಕ್ಕೆ ದುರ್ಗೇಶನ ನಿಶ್ಕಾಳಜಿತನ ಕಾರಣ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ಹೊಸಪೇಟೆ.